


ಇತಿಹಾಸ ಮತ್ತು ಭೂಗೋಳ ಶಿಕ್ಷಕರೊಂದಿಗೆ ಭಾಷಾ ಶಿಕ್ಷಕರಾಗಿದ್ದ ಸೆರ್ಗೆಯ್ ಕಪಿತಾನೊವಿಚ್ ಅಹಿನಿವ್ ಅವರ ಮಗಳ ಮದುವೆ ನಿಶ್ಚಯವಾಗಿತ್ತು. ತಯಾರಿ ಜೋರಾಗಿ ನಡೆದಿತ್ತು. ನಡುಮನೆಯಲ್ಲಿ ಹಾಡು, ಕುಣಿತ, ಮೋಜು ಮಸ್ತಿಯ ಗಲಾಟೆ ತಾರಕಕ್ಕೇರಿತ್ತು. ನಗರದ ಕ್ಲಬ್ಬೊಂದರಿಂದ ಕರೆಸಿದ್ದ ಕಪ್ಪು ಸೂಟು, ಮಾಸಿದ ಬಿಳಿ ಟೈ ಧರಿಸಿದ್ದ ವೇಯ್ಟರುಗಳ ದಂಡು ಅಥಿತಿಗಳಿಗೆ ತಿನಿಸು ತೀರ್ಥಗಳನ್ನು ಚುರುಕಾಗಿ ಸರಬರಾಜು ಮಾಡುತ್ತಿತ್ತು. ಕೋಣೆಯೊಂದರಲ್ಲಿ ಸೋಫಾದ ಮೇಲೆ ಕುಳಿತಿದ್ದ ಗಣಿತ ಶಿಕ್ಷಕ ಟರಾಂಟುಲೊವ್, ಫ್ರೆಂಚ್ ಶಿಕ್ಷಕ ಪಾಸ್ದೆಕೊಯ್, ಆದಾಯ ಕರ ಇಲಾಖೆಯಲ್ಲಿ ಸಹಾಯಕ ತೆರಿಗೆ ಅಧಿಕಾರಿ ಮಜ್ದಾ ಒಂದೇ ಉಸಿರಿಗೆ ಒಟ್ಟೊಟ್ಟಿಗೇ ಪ್ರೇತಾತ್ಮಗಳ, ಅವುಗಳ ಶಕ್ತಿಯ ಬಗ್ಗೆ ಮಾತನಾಡುತ್ತಿದ್ದರು. ತಮಾಷೆ ಎಂದರೆ ಅವರೊಬ್ಬರೂ ಪ್ರೇತಗಳ ಇರುವಿಕೆಯನ್ನು ನಂಬುತ್ತಿರಲಿಲ್ಲ. ಆದರೂ, ಈ ಜಗತ್ತಿನಲ್ಲಿ ಮನುಷ್ಯನ ಅರಿವಿಗೆ ಮೀರಿದ ವಿದ್ಯಮಾನಗಳು ಜರುಗುತ್ತಿವೆ ಎಂಬುದು ಅವರ ಅಭಿಮತವಾಗಿತ್ತು. ಮತ್ತೊಂದು ಕೋಣೆಯಲ್ಲಿ ಸಾಹಿತ್ಯದ ಶಿಕ್ಷಕರಾದ ಡೊಡೊನ್ಸ್ಕಿ ಯಾವ್ಯಾವ ಸಂದರ್ಭಗಳಲ್ಲಿ ಕಾವಲು ಸಿಪಾಯಿಗಳು ಜನರ ಮೇಲೆ ಗುಂಡು ಹಾರಿಸಿ ಕೊಲ್ಲಬಹುದೆಂದು ತಮ್ಮ ಸುತ್ತ ನೆರೆದಿದ್ದವರಿಗೆ ವಿವರಿಸುತ್ತಿದ್ದರು. ಮಾಸ್ತರರ ಔತಣಕೂಟಕ್ಕೆ ಆಮಂತ್ರಣವಿಲ್ಲದ ಊರಿನ ಬಡಪಾಯಿಗಳು ಬಾಯಲ್ಲಿ ಜೊಲ್ಲು ಸುರಿಸುತ್ತಾ ತೆರೆದ ಕಿಟಕಿಗಳಿಂದ ಒಳಗೆ ಇಣುಕುತ್ತಿದ್ದರು.

ಮಧ್ಯರಾತ್ರಿಯಾಗುತ್ತಲಿತ್ತು. ಅಡುಗೆಯ ಸಿದ್ಧತೆ ಹೇಗೆ ನಡೆಯುತ್ತಲಿದೆ ಎಂದು ನೋಡಲು ಅಹಿನಿವ್ ಮಾಸ್ತರರು ಅಡುಗೆ ಕೋಣೆಯ ಕಡೆಗೆ ಹೆಜ್ಜೆ ಹಾಕಿದರು.

ಅಡುಗೆ ಕೋಣೆಯು ದಟ್ಟ ಹೊಗೆಯಿಂದ ತುಂಬಿದ್ದು, ಅಲ್ಲಿನ ಪರಿಸರದಲ್ಲಿ ವಿವಿಧ ಹಂತಗಳಲ್ಲಿ ಬೇಯುತ್ತಿರುವ ಪಕ್ಷಿ ಪ್ರಾಣಿಗಳ ಮಾಂಸದ ವಿಚಿತ್ರ ಕಂಪು ಮೂಗಿಗೆ ಅಡರುತ್ತಿತ್ತು. ಎರಡು ಮೇಜುಗಳ ಮೇಲೆ ಮದ್ಯಪಾನಕ್ಕೆ ಅಗತ್ಯವಿದ್ದ ಎಲ್ಲಾ ಸಲಕರಣೆಗಳ ಜೊತೆಗೆ ಕುರುಕಲು ತಿಂಡಿಗಳನ್ನು ಜೋಡಿಸಿಡಲಾಗಿತ್ತು. ಅಡುಗೆಯ ಮೇಲ್ವಿಚಾರಕಳಾದ ಮಾರ್ಫಾ ಎಂಬ ಕೆಂಪನೆಯ ದಡೂತಿ ಹೆಂಗಸು ಚುರುಕಾಗಿ ಓಡಾಡಿಕೊಂಡಿದ್ದಳು.

"'ಸ್ಟರ್ಜನ್ ಮೀನು' (ಒಂದು ದುಬಾರಿ ಮೀನು) ಎಲ್ಲಿದೆ ತೋರಿಸು ಮಾರ್ಫಾ." ಕೈಗಳನ್ನು ಉಜ್ಜುತ್ತಾ ತುಟಿಗಳಿಗೆ ನಾಲಗೆಯನ್ನು ಸವರುತ್ತಾ ಕೇಳಿದ ಅಹಿನಿವ್. "ಒಹ್, ಇಡೀ ಅಡುಗೆಮನೆಯನ್ನೇ ನುಂಗಬಲ್ಲೆ! ಎಂತ ಸುಮಧುರ ಕಂಪು! ಬಾ... ಬಾ, ಸ್ಟರ್ಜನ್ ಎಲ್ಲಿದೆ ತೋರಿಸು..."

ಮಾರ್ಫಾ ಒಂದು ಬೆಂಚಿನ ಬಳಿಗೆ ಹೋಗಿ ಬಹಳ ಜಾಗರೂಕತೆಯಿಂದ ಮೆಲ್ಲಗೆ ಜಿಡ್ಡಿನಿಂದ ತೊಯ್ದು ಹೋಗಿದ್ದ ಒಂದು ಪತ್ರಿಕೆಯನ್ನು ಎತ್ತಿದಳು. ಒಂದು ದೊಡ್ಡ ಹರಿವಾಣದಲ್ಲಿ ಜಿಲೆಟಿನ್ ಪಾಕದಲ್ಲಿ ಅದ್ದಿದ್ದ, ಕೇಪರ್ಸ್ ಮೊಗ್ಗು, ಆಲಿವ್ ಮತ್ತು ಗಜ್ಜರಿಯಿಂದ ಶೃಂಗರಿಸಿದ್ದ ದೈತ್ಯ ಗಾತ್ರದ ಸ್ಟರ್ಜನ್ ಮೀನು ವಿರಮಿಸಿತ್ತು. ತೆರೆದ ಬಾಯಿ, ಬಿಟ್ಟ ಕಣ್ಣುಗಳಿಂದ ನೋಡುತ್ತಲೇ ನಿಂತ ಅವನ